

## ಕನ್ನಡ ಜಗತ್ತು ಮತ್ತು ವಿಜ್ಞಾನ ಜಗತ್ತು

ಟಿ.ಆರ್. ಅನಂತರಾಮು ಬರೆದಿರುವ 'ಕನ್ನಡ ಜಗತ್ತು ಮತ್ತು ವಿಜ್ಞಾನ ಜಗತ್ತು' (ನ. 12) ಮುಖಪುಟ ಲೇಖನ ಚೆನ್ನಾಗಿದೆ. ನಮ್ಮ ಕನ್ನಡ ಸಾಹಿತ್ಯದ ಮಹಾಸಾಹಿತಿಗಳು ಬರೆದಿರುವ ವಿಜ್ಞಾನ ಪುಸ್ತಕಗಳ ಬಗ್ಗೆ ಒಳ್ಳೆಯ ಮಾಹಿತಿ ನೀಡಿದ್ದಾರೆ.

—ವಂದನಾ ಕುಲಕರ್ಣಿ, ಬೆಂಗಳೂರು

ಸಂಗ್ರಹಯೋಗ್ಯ ಲೇಖನ. 'ಸುಧಾ'ದಲ್ಲಿ ಪ್ರಕಟವಾದ ಚಿತ್ರಮಯ 'ಜ್ಞಾನಕೋಶ'ದ ಬಗ್ಗೆಯೂ ಮಾಹಿತಿ ನೀಡಬಹುದಿತ್ತು.

—ಎಸ್.ವಿ. ನರಸಿಂಹನ್

ಅನಂತರಾಮು ಅವರ ಸರಳ, ಅರ್ಥವಾಗಿಸಬಲ್ಲ ಶೈಲಿ ಲೇಖನದ ಪ್ಲಸ್ ಪಾಯಿಂಟ್. ನಾಗೇಶ್ ಹೆಗಡೆಯವರ ಬರಹಗಳು ಅವತ್ತಿಗೂ ಇವತ್ತಿಗೂ ನಂಬರ್ 1! ಪಾ.ವೆಂ. ಕುರಿತು ಬರೆದದ್ದು ಓದಿ ಹೆಮ್ಮೆ ಎನಿಸಿತು.

—ಅನು

ಲೇಖನದಲ್ಲಿ ಅನೇಕ ಮಹನೀಯರ ಪರಿಚಯ ಸಂತೋಷ ನೀಡಿತು. ಮುಂದಿನ ಸಂಚಿಕೆಗಳಲ್ಲಿ 'ಕನ್ನಡ ಜ್ಞಾನಪೀಠ' ಪ್ರಶಸ್ತಿ ಪಡೆದ ಮಹನೀಯರನ್ನು ಪರಿಚಯ ಮಾಡಿಕೊಡಲು ವಿನಂತಿ.

—ಕೆ. ಹೊನ್ನಪ್ಪ, ತುಮಕೂರು

ಕನ್ನಡದ ಕುರಿತು ಸಿದ್ಧಸೂತ್ರಗಳೊಂದಿಗೆ ಮಂಡನೆ ಮಾಡುವದನ್ನು ಬಿಟ್ಟು, ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದಂಥ ವಿಭಿನ್ನ ವಿಷಯದ ಚರ್ಚೆ ಲೇಖಕರು ನಡೆಸಿದ್ದಾರೆ.

—ವಿದ್ಯಾ ಶಿರಹಟ್ಟಿ, ಧಾರವಾಡ

ವಿಜ್ಞಾನ ಜಗತ್ತಿನಲ್ಲಿ ವೈದ್ಯ ವಿಜ್ಞಾನವೂ ಇದೆ. 1973ರಲ್ಲಿ ಡಾ. ಡಿ. ಎಸ್. ಶಿವಪ್ಪನವರು 'ಇಂಗ್ಲಿಷ್ – ಕನ್ನಡ ವೈದ್ಯ ಪದಕೋಶ'ವನ್ನು ರಚಿಸಿ 40,000 ವೈದ್ಯ ತಾಂತ್ರಿಕ ಪದಗಳಿಗೆ ಕನ್ನಡದಲ್ಲಿ ಸಮಪದಗಳನ್ನು ಸೃಷ್ಟಿಸಿ 'ವೈದ್ಯ ಕನ್ನಡ ಪದಬ್ರಹ್ಮ' ಎನಿಸಿಕೊಂಡರು. ಕನ್ನಡ ವೈದ್ಯಸಾಹಿತ್ಯದಲ್ಲಿ ಇದುವರೆಗೆ 2000ಕ್ಕೂ ಹೆಚ್ಚಿನ ಪುಸ್ತಕಗಳು ಕನ್ನಡದಲ್ಲಿ ಪ್ರಕಟಗೊಂಡಿರುವುದು ಗಮನಾರ್ಹ. ಜನರಲ್ಲಿ ಆರೋಗ್ಯಕರ ಅರಿವು ಮೂಡಿಸುವುದರಲ್ಲಿ ಇವು ಪರಿಣಾಮಕಾರಿಯಾಗಿವೆ.

—ಡಾ. ಸಿ.ಆರ್. ಚಂದ್ರಶೇಖರ್

ವಿಜ್ಞಾನ ಸಾಹಿತ್ಯದ ಅವಲೋಕನ ಸೊಗಸಾಗಿದೆ. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಪುಸ್ತಕಗಳ ಪರಿಚಯ ಅಮೂಲ್ಯವಾದದ್ದು.

—ಶಾಂತವೀರ ಎಸ್., ಚಿತ್ರದುರ್ಗ

ಲೇಖನ ವಿಜ್ಞಾನದೊಂದಿಗಿನ ಕನ್ನಡ ಭಾಷೆಯ ನಂಟನ್ನು ಸವಿಸ್ತಾರವಾಗಿ ತಿಳಿಸಿದೆ. ವಿಜ್ಞಾನ ಮಾತೃಭಾಷೆಯಲ್ಲಿ ಅರ್ಥವಾದರೆ ಅದು 'ಕಬ್ಬಿಣದ ಕಡಲೆ' ಅಲ್ಲ ಎಂಬ ಸಂದೇಶವನ್ನು ಈ ಲೇಖನ ಸಾರಿದೆ.

—ಎಂ. ಸಂಜೀವ, ಕಲಬುರಗಿ

ಕನ್ನಡದಲ್ಲಿ ವಿಜ್ಞಾನಕ್ಕಾಗಿ ಶ್ರಮಿಸಿದ ಹಲವು ಮಾನ್ಯರನ್ನು ಲೇಖಕರು ಗುರ್ತಿಸಿದ್ದಾರೆ. ಆ ಮಾನ್ಯರ ಜೊತೆಗೇ ಶ್ರಮಿಸಿದ ಇನ್ನೊಬ್ಬ ವ್ಯಕ್ತಿ ಡಿ.ಆರ್. ಬಳೂರಗಿ. ಇವರು ಎಪ್ಪತ್ತರ ದಶಕದಿಂದ ಕನ್ನಡದಲ್ಲಿ ವಿಜ್ಞಾನ ವಿಷಯಗಳನ್ನು ಕುರಿತು ಬರೆಯುತ್ತಿದ್ದರು. ಈಗ ನಿವೃತ್ತಿ ಜೀವನದಲ್ಲಿ ಅವರು ಇನ್ನಷ್ಟು ಕಾರ್ಯೋನ್ಮುಖರಾಗಿದ್ದಾರೆ. ಅವರಂತೇ ಇನ್ನೊಬ್ಬ ಹಿರಿಯ ವ್ಯಕ್ತಿ ದಿವಂಗತ ಸೇತುರಾವ್. ಸೇತುರಾವ್ ಅವರು ಲಕ್ಷ್ಮಣರಾಯರ ಸಮಕಾಲೀನರು. ವಿಜ್ಞಾನ ಸಂಸ್ಥೆ ಹಾಗು ಬಾಲವಿಜ್ಞಾನದ ಬೆಳವಣಿಗೆಗೆ ಲಕ್ಷ್ಮಣರಾಯರ ಜೊತೆಗೆ ಸೇತುರಾವ್ ಅವರೂ ಶ್ರಮಿಸಿದ್ದರು.

—ಗೋಪಾಲ ಆಶ್ರಿತ, ಬೆಂಗಳೂರು

ಕರ್ನಾಟಕ ವಿಜ್ಞಾನ ಪರಿಷತ್ ಅಧ್ಯಕ್ಷರಾಗಿದ್ದ ಎಸ್.ಜಿ. ನಾಗಲೋಟಿಮಠ, ಖ್ಯಾತ ವಿಜ್ಞಾನ ಕಥೆಗಾರ ರಾಜಶೇಖರ ಭೂಸನೂರಮಠ, ಡಿ.ಆರ್. ಬಳೂರಗಿ, ಹ.ಶಿ. ಭೈರನಟ್ಟಿ ಸಾಕಷ್ಟು ವೈಜ್ಞಾನಿಕ ಬರಹಗಳನ್ನು ಬರೆದಿದ್ದಾರೆ.

—ಮಲ್ಲಿಕಾರ್ಜುನ, ಹೆಗ್ಗಳಗಿ

ಲೇಖನ ಕನ್ನಡದಲ್ಲಿ ಏನೆಲ್ಲ ಪ್ರಥಮಗಳಿವೆ ಎಂಬುದನ್ನು ತಿಳಿಸುತ್ತದೆ. ನಮ್ಮ ಭಾಷೆಯ ಮೇಲೆ ಅಭಿಮಾನ ಹೆಚ್ಚಿಸುತ್ತದೆ. ಹಿರಿಯರ ಆಶೀರ್ವಾದ ನಮ್ಮ ಮೇಲೆ ಇದೆ ಎಂದು ದೃಢಪಡಿಸುತ್ತದೆ.

—ರೇಖ ಚೈತನ್ಯ, ಬೆಂಗಳೂರು

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಡೆದು ಬಂದ ಹಾದಿಯ ಬಗೆಗಿನ ವಿವರಣೆ ಅನನ್ಯ. ವಿಜ್ಞಾನದ ಕುರಿತಾದ ಕಾರ್ಯಕ್ರಮಗಳನ್ನು ನೀಡುತ್ತಿರುವ 'ಆಕಾಶವಾಣಿ'ಯ ಕೊಡುಗೆಯೂ ಅಸದೃಶ.

—ಪ್ರಭಾಪ್ರಸಾದ್

## ಇಸ್ಪೀಟಾಯಣ

ನ. 12ರ ಸಂಚಿಕೆಯಲ್ಲಿ ಉಷಾ ನರಸಿಂಹನ್ ಬರೆದ 'ಇಸ್ಪೀಟಾಯಣ' ಪ್ರಬಂಧ ತುಂಬಾ ಚೆನ್ನಾಗಿ ನಿರೂಪಿತವಾಗಿದೆ. ಕುಟುಂಬದ ಹಿರಿಯ ತಲೆಯೊಂದು ದೈವಾಧೀನವಾದಾಗ ವಿವಿಧ ದಾನಗಳ ಜೊತೆ ವೈತರಣೀ ನದಿ ದಾಟಲು ಇಸ್ಪೀಟ್ ಪ್ಯಾಕನ್ನು ದಾನ ಮಾಡಿದ್ದು ನಗೆಯುಕ್ಕಿಸಿತು.

—ಅಶೋಕ ಪರ್ವತಿ, ಬಿ. ಶೋಭಾ ಅರಸ, ತೆಕ್ಕಟ್ಟೆ



ಪ್ರಬಂಧ ನನಗೆ ತುಂಬಾ ಖುಷಿ ಕೊಟ್ಟಿತು. ನಮ್ಮಲ್ಲೂ ಪೂಜೆ, ಮದುವೆ, ಉಪನಯನ ಇತ್ಯಾದಿ ಸಮಾರಂಭಗಳಲ್ಲಿ ಇಸ್ಪೀಟ್ ಆಟ ಆಡುತ್ತಿದ್ದೆವು. ಅದು ರಾತ್ರಿ ಶುರುವಾಗಿ ಬೆಳಗಿನವರೆಗೆ ಮುಂದುವರಿಯುತ್ತಿತ್ತು. ಆ ದಿನ ಮಾಡಿದ ಸಿಹಿತಿಂಡಿ ಇದಕ್ಕೆಂದೇ ಪ್ರತ್ಯೇಕ ತೆಗೆದಿರಿಸುತ್ತಿದ್ದರು. ಚಿಕ್ಕವರು ಹೆಚ್ಚಾಗಿ ಕತ್ತೆ ಆಟ ಆಡುತ್ತಿದ್ದರು. ಆದರೆ ಯಾರೂ ದುಡ್ಡು ಇಟ್ಟು ಆಡುತ್ತಿರಲಿಲ್ಲ.

—ಗೋಪಾಲಕೃಷ್ಣ ಭಟ್

ಸೊಗಸಾದ ಪ್ರಬಂಧ. ಓದುತ್ತಾ ಹೊಟ್ಟೆ ಹುಣ್ಣಾಗುವಷ್ಟು ನಗು ಬಂತು. ಅವರ ಬರವಣಿಗೆ, ಭಾಷಾ ಬಳಕೆ, ಅವರ ಹಾಸ್ಯ ಪ್ರಜ್ಞೆ ಅಮೋಘ. ನಮ್ಮ ವಂಶವೂ ಇಸ್ಪೀಟು ಆಟಕ್ಕೆ ಫೇಮಸ್. ನನ್ನ ಮಗಳಿಗೂ ರಕ್ತಗತವಾಗಿ ಈ ಆಟ ಬಂದಿದೆ. ನನ್ನ ಶ್ರೀಮತಿ ಮದುವೆಯಾದ ಹೊಸದರಲ್ಲಿ ಇಸ್ಪೀಟು ಅಂದ್ರೆ ಮೂಗು ಮುರೀತಿದ್ಲು. ಈಗ ನನಗಿಂತಾ ಸೊಗಸಾಗಿ ಆಡುತ್ತಾಳೆ. ಲಾಕ್‌ಡೌನ್‌ನಲ್ಲಿ ನಾನು, ನನ್ನ ಶ್ರೀಮತಿ, ನನ್ನಕ್ಕಂದಿರು, ಮಗಳು ಎಲ್ಲಾ ಸೇರಿ ಇಸ್ಪೀಟು ಆಟ ಎಂಜಾಯ್ ಮಾಡಿದೆವು.

—ಎಸ್. ವಿ. ಗೋಪಾಲ್ ರಾವ್, ಬೆಂಗಳೂರು

## ಯಶದ ಆಸೆಯಲ್ಲಿ ಯಶಾ

ನ. 12ರ ಸಂಚಿಕೆಯ 'ಗಾಂಧಿನಗರ ಪೋಸ್ಟ್' ಪುಟದಲ್ಲಿ ಪದ್ಮನಾಭ ಭಟ್ ಬರೆದಿರುವ 'ಯಶದ ಆಸೆಯಲ್ಲಿ ಯಶಾ' ಲೇಖನದಲ್ಲಿ 'ಉಜಿರೆಯ ಆಳ್ವಾಸ್ ಇಂಜಿನಿಯರಿಂಗ್ ಕಾಲೇಜ್' ಎಂದು ತಪ್ಪಾಗಿ ಪ್ರಕಟವಾಗಿದೆ. ಆಳ್ವಾಸ್ ಇಂಜಿನಿಯರಿಂಗ್ ಕಾಲೇಜ್ ಇರುವುದು ಮೂಡುಬಿದಿರೆಯಲ್ಲಿ. ಉಜಿರೆಯಲ್ಲಿ ಎಸ್‌ಡಿಎಮ್ ಇಂಜಿನಿಯರಿಂಗ್ ಕಾಲೇಜ್ ಇದೆ.

—ಕಜೆ ಸುಬ್ರಹ್ಮಣ್ಯ ಭಟ್, ವೇಣೂರು

## ರಾಮಪತ್ರೆಯ ಆದಿಮ ಕಾಡುಗಳು

ನ. 12ರ ಸಂಚಿಕೆಯಲ್ಲಿ ಸುಮಂಗಲಾ ಎಸ್. ಮುಮ್ಮಿಗಟ್ಟಿ ಅವರ ಲೇಖನ 'ರಾಮಪತ್ರೆಯ ತವರು ಆದಿಮ ಕಾಡುಗಳು' ತುಂಬಾ ಅಪರೂಪದ್ದಾಗಿದೆ ಮತ್ತು ಸಂಗ್ರಹಯೋಗ್ಯವಾಗಿದೆ.

—ಲಕ್ಷ್ಮಣ್ ರಾವ್ ಎಂ. ಎಲ್., ದಾವಣಗೆರೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in